# ರೋಗಗಳಿಗನುಸಾರ ನಾಮಜಪ ಉಪಾಯ

## ಮನೋಗತ

‘ನಾಮಜಪ ಉಪಾಯ’ ಎಂಬ ಗ್ರಂಥಮಾಲಿಕೆಯ ಈ ಖಂಡದಲ್ಲಿ ೩೦೦ಕ್ಕಿಂತಲೂ ಹೆಚ್ಚು ಶಾರೀರಿಕ ಮತ್ತು ಮಾನಸಿಕ ರೋಗಗಳಿಗೆ ಉಪಯುಕ್ತವಾಗುವ ವಿವಿಧ ನಾಮಜಪಗಳು ಒಂದೇ ನೋಟದಲ್ಲಿ ತಿಳಿಯಲು ಪಟ್ಟಿಯ ಸ್ವರೂಪದಲ್ಲಿ ಕೊಡಲಾಗಿದೆ. ಇದರಲ್ಲಿ ಪ್ರಮುಖವಾಗಿ ದೇವತೆಗಳ ನಾಮಜಪವನ್ನು ಕೊಡಲಾಗಿದೆ.

ಮನುಷ್ಯನ ದೇಹವು ಪಂಚಮಹಾಭೂತಗಳಿಂದ (ಪಂಚತತ್ತ್ವಗಳಿಂದ) ನಿರ್ಮಾಣವಾಗಿರುವುದರಿಂದ, ಅದಕ್ಕೆ ಬರುವ ರೋಗಗಳೂ ಪಂಚತತ್ತ್ವಗಳಿಗೆ ಸಂಬಂಧಿಸಿರುತ್ತವೆ. ದೇವತೆಗಳ ಕಾರ್ಯವು ಸಗುಣ ಮತ್ತು ನಿರ್ಗುಣ ಹೀಗೆ ಎರಡೂ ಸ್ತರದಲ್ಲಿರುತ್ತದೆ. ದೇವತೆಗಳು ನಿರ್ಗುಣ ಸ್ತರದ ಕಾರ್ಯದ ಸಂದರ್ಭದಲ್ಲಿ ಪಂಚತತ್ತ್ವಗಳ ಆಚೆಗಿದ್ದಾರೆ ಮತ್ತು ಸಗುಣ ಸ್ತರದ ಕಾರ್ಯದ ಸಂದರ್ಭದಲ್ಲಿ ಅವರು ಪಂಚತತ್ತ್ವಗಳಿಂದ ಕೂಡಿದ್ದಾರೆ. ಆದುದರಿಂದ ಪ್ರತಿಯೊಬ್ಬ ದೇವತೆಯಲ್ಲಿ ಪಂಚತತ್ತ್ವಗಳು ಇದ್ದೇ ಇರುತ್ತವೆ. ಆದುದರಿಂದ ಪಂಚತತ್ತ್ವಗಳಿಗೆ ಸಂಬಂಧಿಸಿದ ಎಲ್ಲ ರೋಗಗಳನ್ನು ದೂರಗೊಳಿಸುವ ಸಾಮರ್ಥ್ಯವು ಪ್ರತಿಯೊಬ್ಬ ದೇವತೆಯಲ್ಲಿರುತ್ತದೆ. ಹೀಗಿರುವಾಗಲೂ ಪ್ರತಿಯೊಂದು ರೋಗಕ್ಕೆ ವಿಶಿಷ್ಟ ದೇವತೆಯ ನಾಮಜಪವನ್ನು ನೀಡುವ ಮುಖ್ಯ ಕಾರಣವೇನೆಂದರೆ, ಒಬ್ಬ ದೇವರಲ್ಲಿರುವ ಪಂಚತತ್ತ್ವಗಳ ಪೈಕಿ ಯಾವುದಾದರೊಂದು ತತ್ತ್ವವು ಅವರಲ್ಲಿ ಹೆಚ್ಚಿರುತ್ತದೆ, ಆದುದರಿಂದ ಆ ದೇವರು ಆ ತತ್ತ್ವಕ್ಕೆ ಸಂಬಂಧಿಸಿದ ರೋಗವನ್ನು ಇತರ ದೇವರ ತುಲನೆಯಲ್ಲಿ ಬೇಗ ಸರಿಪಡಿಸಬಲ್ಲರು.

ಈ ಗ್ರಂಥದಲ್ಲಿ ಮುಂದು ಮುಂದಿನ ಹಂತದ ಶಬ್ದಬ್ರಹ್ಮ (ಗಾಯತ್ರಿ ಮಂತ್ರದಲ್ಲಿನ ಶಬ್ದಗಳ ನಾಮಜಪ), ಅಕ್ಷರಬ್ರಹ್ಮ (ದೇವತೆಯ ತತ್ತ್ವ / ಶಕ್ತಿಯಿಂದ ಅಡಕವಾಗಿರುವ ಅಕ್ಷರಗಳ ನಾಮಜಪ), ಬೀಜಮಂತ್ರ ಮತ್ತು ಅಂಕಜಪಗಳನ್ನೂ ನೀಡಲಾಗಿದೆ. ಯಾವುದಾದರೊಬ್ಬ ವ್ಯಕ್ತಿಯ ಪ್ರಕೃತಿ, ಹಿಂದಿನ ಜನ್ಮದ ಅಥವಾ ಈ ಜನ್ಮದಲ್ಲಿನ ಸಾಧನೆ, ಆಧ್ಯಾತ್ಮಿಕ ಮಟ್ಟ ಇತ್ಯಾದಿಗಳತ್ತ ಗಮನಹರಿಸಿದರೆ ಅವನಿಗೆ ಮುಂದು ಮುಂದಿನ ಹಂತದ ನಾಮಜಪವೂ ಉಪಯುಕ್ತವಾಗಬಲ್ಲದು.

ನಾಮಜಪ ಉಪಾಯ ಹೆಚ್ಚು ಪರಿಣಾಮಕಾರಿಯಾಗಲು ಮಾಡಬೇಕಾದ ಮುದ್ರೆ, ನ್ಯಾಸಕ್ಕೆ ಸಂಬಂಧಿಸಿದ ಮಾಹಿತಿ, ಹಾಗೆಯೇ ನಾಮಜಪಕ್ಕೆ ಹೇಗೆ ಕುಳಿತುಕೊಳ್ಳಬೇಕು, ಭಾವಪೂರ್ಣ ನಾಮಜಪವಾಗಲು ಮಾಡಬೇಕಾದ ಕೃತಿ ಮುಂತಾದ ಉಪಯುಕ್ತ ಸೂಚನೆಗಳನ್ನು ‘ನಾಮಜಪಗಳಿಂದ ದೂರವಾಗುವ ರೋಗಗಳು’ ಗ್ರಂಥದಲ್ಲಿ ನೀಡಲಾಗಿದೆ.

‘ನಾಮಜಪದ ಉಪಾಯ ಮಾಡಿ ಹೆಚ್ಚೆಚ್ಚು ರೋಗಿಗಳು ಆದಷ್ಟು ಬೇಗನೇ ರೋಗಮುಕ್ತರಾಗಲಿ’ ಎಂದು ಶ್ರೀ ಗುರುಚರಣಗಳಲ್ಲಿ ಮತ್ತು ವಿಶ್ವಪಾಲಕ ಶ್ರೀ ನಾರಾಯಣನ ಚರಣಗಳಲ್ಲಿ ಪ್ರಾರ್ಥನೆ ! – ಸಂಕಲನಕಾರರು

# ಅನುಕ್ರಮಣಿಕೆ


೧. **ನಾಮಜಪಗಳ ವಿವಿಧ ವಿಧಗಳ ಪೈಕಿ ತಮ್ಮ ಪ್ರಕೃತಿಗನುಸಾರ ಹೆಚ್ಚು ಉಪಯುಕ್ತವಾಗಿರುವ ನಾಮಜಪವನ್ನು ಹೇಗೆ ಆಯ್ದುಕೊಳ್ಳಬೇಕು ?** ೧೧

೨. **ರೋಗಗಳಿಗನುಸಾರ ವಿವಿಧ ನಾಮಜಪಗಳು, ನಾಮಜಪಗಳಿಗೆ ಸಂಬಂಧಿಸಿದ ಮಹಾಭೂತಗಳು (ತತ್ತ್ವಗಳು) ಮತ್ತು ಕೆಲವು ವಿಶೇಷ ನ್ಯಾಸಸ್ಥಾನಗಳು (ರೋಗಗಳ ಪಟ್ಟಿ)** ೧೨

೨ ಅ. ಕೆಲವು ಸೂಚನೆಗಳು ೧೨

೨ ಆ. ರೋಗಗಳ ಪಟ್ಟಿ ೧೬

೧. ತಲೆ ಮತ್ತು ನರವ್ಯೂಹದ (ನರವ್ಯೂಹ – ಮೆದುಳು, ಬೆನ್ನುಹುರಿ ಮತ್ತು ನರತಂತುಗಳು) ರೋಗಗಳು ೧೬

೨. ಕಣ್ಣುಗಳ ರೋಗಗಳು ೨೦

೩. ಮೂಗಿನ ರೋಗಗಳು ೨೧

೪. ಬಾಯಿಯ ರೋಗಗಳು ೨೨

೫. ಹಲ್ಲು ಮತ್ತು ವಸಡುಗಳ ರೋಗಗಳು ೨೪

೬. ಕಿವಿಯ ರೋಗಗಳು ೨೫

೭. ಗಂಟಲಿನ ರೋಗಗಳು ೨೬

೮. ರಕ್ತಪರಿಚಲನಾ ವ್ಯೂಹದ ರೋಗಗಳು ೨೬

೯. ಶ್ವಾಸಾಂಗವ್ಯೂಹದ ರೋಗಗಳು ೨೭

೧೦. ಜೀರ್ಣಾಂಗವ್ಯೂಹದ ರೋಗಗಳು ೨೯

೧೧. ಮೂತ್ರಜನಕಾಂಗವ್ಯೂಹದ ರೋಗಗಳು ೩೫

೧೨. ಸಂತಾನೋತ್ಪತ್ತಿ ವ್ಯವಸ್ಥೆಯ ರೋಗಗಳು ೩೬

೧೩. ಎಲುಬು ಮತ್ತು ಸ್ನಾಯು ವ್ಯವಸ್ಥೆಯ ರೋಗಗಳು ೪೧

೧೪. ತ್ವಚೆಯ ರೋಗಗಳು ೪೪

೧೫. ಕೂದಲಿನ ಎಲ್ಲ ರೋಗಗಳು ೪೭

೧೬. ಉಗುರಿನ ಎಲ್ಲ ರೋಗಗಳು ೪೭
೧೭. ರಕ್ತದ ರೋಗಗಳು ೪೭
೧೮. ಅಂತಃಸ್ರಾವಕ (ನಿರ್ನಾಳ) ಗ್ರಂಥಿಗಳ ರೋಗಗಳು ೪೯
೧೯. ಜ್ವರ ಮತ್ತು ಸೋಂಕು ರೋಗಗಳು ೪೯
೨೦. ವಿವಿಧ ರೀತಿಯ ಗೆಡ್ಡೆಗಳು ಮತ್ತು ಅರ್ಬುದರೋಗ ೫೧
೨೧. ಚಿಕ್ಕ ಮಕ್ಕಳ ರೋಗಗಳು ೫೨
೨೨. ವಿಷಬಾಧೆ ೫೨
೨೩. ಅಪಘಾತ ೫೩
೨೪. ಇತರ ಶಾರೀರಿಕ ರೋಗಗಳು ೫೩
೨೫. ಮಾನಸಿಕ ರೋಗಗಳು ೫೫
೨೬. ಇತರ ಲಕ್ಷಣಗಳು ಅಥವಾ ರೋಗಗಳು (ಶರೀರ ಮತ್ತು / ಅಥವಾ ಮನಸ್ಸಿಗೆ ಸಂಬಂಧಿಸಿದ, ಹಾಗೆಯೇ ಯಾವುದೇ ಅವಯದಲ್ಲಾದರೂ ಉತ್ಪನ್ನವಾಗಬಲ್ಲ ಲಕ್ಷಣಗಳು ಅಥವಾ ರೋಗಗಳು) ೬೩
೨೭. ಇತರ ೬೮
೨೮. ಎಲ್ಲ ರೋಗಗಳಿಗಾಗಿ ಉಪಾಯಗಳು ೬೯
**ಪರಿಶಿಷ್ಟ ೧ :** ಕೆಲವು ರೋಗಗಳು ಮತ್ತು ಆಧ್ಯಾತ್ಮಿಕ ತೊಂದರೆಗಳ ನಿವಾರಣೆಗಾಗಿ ಮಾಡಬೇಕಾದ ನಾಮಜಪ ಇತ್ಯಾದಿ ಉಪಾಯಗಳು ೭೦

**‘ಮುಂಬರುವ ಆಪತ್ಕಾಲದ ಸಂಜೀವಿನಿ’ ಮಾಲಿಕೆಯ ಗ್ರಂಥ !**

## ರೋಗ ನಿವಾರಣೆಗಾಗಿ ನಾಮಜಪ

ದೇವರ ನಾಮಜಪವು ಉಪಾಸನೆಗಾಗಿ, ಹಾಗೆಯೇ ರೋಗಗಳ ನಿವಾರಣೆಗಾಗಿಯೂ ಉಪಯುಕ್ತವಾಗಿರುತ್ತದೆ. ಆ ನಾಮಜಪವನ್ನು ಮಾಡುವುದರಿಂದ ಶರೀರದಲ್ಲಿ ನಿರ್ಮಾಣವಾಗುವ ಆ ದೇವರ ವಿಶಿಷ್ಟ ಕಂಪನಗಳಿಂದ ಶರೀರದಲ್ಲಿ ನಿರ್ಮಾಣವಾದ ಅನೈಸರ್ಗಿಕ ಅಥವಾ ಅಸಹಜ ಕಂಪನಗಳು ಸುಧಾರಿಸಲು ಅಂದರೆ ರೋಗಗಳು ನಿವಾರಣೆಯಾಗಲು ಸಹಾಯವಾಗುತ್ತದೆ.